ಎಂ.ಎ. ಕುಮಾರ್, ಬೆಂಗಳೂರು
ಏಕಪತ್ನೀವ್ರತಸ್ಥ ರಾಮನಿಗೆ ಸೀತೆಯ ಮೇಲೆ ಅನುಮಾನ ಹುಟ್ಟಿದ್ದು ಏಕೆ, ಹೇಗೆ?



ರಾವಣ ಏಕಪತ್ನೀವ್ರತಸ್ಥನಲ್ಲವಲ್ಲ; ಆಗಬಾರದ್ದು ಆಗಿರಬಹುದೆಂಬ ಸಮಾಜದ ಗುಮಾನಿಗೆ ರಾಮ ಸ್ಪಂದಿಸಿದನಷ್ಟೆ.

ಡಾ. ತಿಮ್ಮರಾಜು, ದಾವಣಗೆರೆ
ಭೌತಿಕವಾಗಿ ಯುದ್ಧ ಒಂದೆಡೆ, ಧರ್ಮಗಳ ನಡುವಿನ ಯುದ್ಧ ಇನ್ನೊಂದೆಡೆ. ಇವೆಲ್ಲ ಯಾರ ಸಂತೋಷಕ್ಕಾಗಿ?
ಸಂತೋಷಕ್ಕಲ್ಲ, ಸ್ವಾರ್ಥಕ್ಕೆ; ತೋಳಗಳ ಸ್ವಾರ್ಥಕ್ಕಾಗಿ ಮೊಲಗಳ ಬಲಿ.

ಬೂಕನಕೆರೆ ವಿಜೇಂದ್ರ, ಮೈಸೂರು
ಹಿರಣ್ಯಕಶಿಪುವಿನಂತೆ ಸಾವೇ ಬರದ ವರವನ್ನು ನಮ್ಮ ರಾಜಕಾರಣಿಗಳೂ ಪಡೆದುಬಿಟ್ಟರೆ...?
ವಿರೋಧಪಕ್ಷಗಳು ಅವನ ಅವನತಿಗೆ ಅವಶ್ಯವಾದ ನರಸಿಂಹಕಂಬವನ್ನು ಕಟ್ಟುತ್ತವೆ.

ಹೆಚ್.ಕೆ. ಸುಬ್ಬಲಕ್ಷ್ಮಿ, ಕೋಲಾರ
ಹುಡುಗಿಯರಿಗೆ ಪ್ಲಾಟಿನಮ್ ಬಗ್ಗೆ ಆಕರ್ಷಣೆ ಹೆಚ್ಚಾಗುತ್ತಿದೆಯಂತೆ. ಹುಡುಗರಿಗೆ?



ಅವರೇನೂ ಬದಲಾಗಿಲ್ಲ. ಇಂದಿಗೂ ಅವರಿಗೆ ಹುಡುಗಿಯರೇ ಆಕರ್ಷಕ.

ನಿರುಕ್ತಾ, ಬೆಂಗಳೂರು
ರಾಜಕೀಯದಲ್ಲೂ ದಂಡಯಾತ್ರೆ ಹೊಡೀತಾರಾ ಸ್ವಾಮಿ?
ಹೊಡೆಯುವರಲ್ಲ; ಅವರದು ಪಾದ–ಯಾತ್ರೆ; ಜನತೆಗೆ ಟ್ರಾಫಿಕ್ ಜಾಮ್‌ನಿಂದ ಸಮಯ, ಇಂಧನ ದಂಡ.

ಪಿ. ಜಯವಂತ ಪೈ, ಕುಂದಾಪುರ
ಕಂಪ್ಲೀಟ್‌ಗೂ ಫಿನಿಷ್‌ಗೂ ವ್ಯತ್ಯಾಸವೇನು?
ಯೋಗ್ಯತೆಯೇ. ಯೋಗ್ಯತೆಯನ್ನು ಸಂಪಾದಿಸಿದವನು ಪರಿಪೂರ್ಣ, ಸಂಪಾದಿಸದವನು ಪರಿಸಮಾಪ್ತಿ.

ಹೆಚ್.ಎಸ್. ಶೇಷಗಿರಿ
ರೀ ರಾಂ, ನಿಮ್ಮ ಸೀತೆಯನ್ನು ಯಾವ ಕಾಡಿಗೆ ಕಳಿಸಿದ್ದೀರಿ? ನಿಮ್ಮ ಉತ್ತರಗಳಲ್ಲೆಲ್ಲೂ ಆಕೆಯ ಸುಳಿವಿಲ್ಲ.
ಮಾನಸ ಸರೋವರಕ್ಕೆ. ಉತ್ತರಗಳಲ್ಲಿ ಆಗಾಗ್ಗೆ ಮಿಂಚುಳ್ಳಿಗಳು ಕಾಣುತ್ತವಲ್ಲ.

ಅಂಚೆ ಸುಬ್ರಹ್ಮಣ್ಯ, ಕೊಪ್ಪ
ಸಂಸಾರವನ್ನು ಸಾಗರಕ್ಕೆ ಹೋಲಿಸುವುದು ಏಕೆ ಗುರು?
ತೆರೆಗಳಿಲ್ಲದೆ ಎರಡೂ ಇಲ್ಲವಾದ್ದರಿಂದ.

ರಾಜೀವ್ ಎನ್. ಮಾಗಲ್, ಸಕಲೇಶಪುರ
'ವಾಟ್ಸ್‌ಆ್ಯಪ್ ವಕೀಲ'ರಿಗೆ ಕೋರ್ಟಿನಲ್ಲಿ ವಾದ ಮಾಡಲು ಅನುಮತಿ ನೀಡಿದರೆ?
ಕಟಕಟೆಯಲ್ಲಿ ನಿಂತು ಸೆಲ್ಫಿ ತೆಗೆದುಕೊಂಡು ಫಾರ್ವರ್ಡ್ ಮಾಡಿ ಇಳಿದುಹೋಗುತ್ತಾರೆ.

ಬಿ.ಆರ್. ಉಷಾ, ಬೆಂಗಳೂರು
ಹೆಣ್ಣಿಗೆ ಮದುವೆ ಆದಮೇಲೆ ಎರಡು ಮನೆ. ಗಂಡಿಗೆ?
ಎರಡು ಮನಸ್ಸು.

ಮಲ್ಲಿಕಾರ್ಜುನ, ಸುರಧೇನುಪುರ
ಸಾಮಾನ್ಯರಿಗೆ ಪೊಲೀಸರ ಭಯ, ಘನಂದಾರಿಗಳಿಗೆ ಪೊಲೀಸರ ಅಭಯ ಅಂತಿದಾನಲ್ಲ ಇಲ್ಲೊಬ್ಬ?
ಸರಿಯೇ. ವಿತ್ತ ಮಾತನಾಡುವಾಗ ಚಿತ್ತ ತೆಪ್ಪಗಿರುತ್ತದೆ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಅನುಮಾನಾಸ್ಪದ ವ್ಯಕ್ತಿ ಎಂದರೆ ಯಾರು?
ಮಾನದ ಪರಿವೆ ಇಲ್ಲದೆ ಇನ್ನೊಬ್ಬರನ್ನು ಅನುಸರಿಸುವವನು.

ಬಿ.ವಿ. ಸುರೇಶ್, ಬೆಂಗಳೂರು
ಋಣಾನುಬಂಧ ರೂಪೇಣ ಪಶುಪತ್ನಿಸುತಾಲಯಃ. ಇದರಲ್ಲಿ ಪತಿ ಇಲ್ಲವಲ್ಲಾ...?
ಹಾಲಿ, ಭಾವಿ ಪತಿಯರಿದ್ದಾರಲ್ಲ – ಪಶು, ಸುತ.

## ವಾರದ ಪ್ರಶ್ನೆ

ಎಂ.ಟಿ. ರಮಾನಂದರೆಡ್ಡಿ, ಮದಕರಿಪುರ
ಕೆಮ್ಮುವಾಗ ಕಣ್ಮುಚ್ಚಿಕೊಳ್ಳದ ನಾವು ಸೀನುವಾಗ ಏಕೆ ಮುಚ್ಚಿಕೊಳ್ಳುತ್ತೇವೆ?
ಜೊತೆಗಾರನಾದ ಮೂಗು ಅದುರುವುದನ್ನು ನೋಡಲಾರದೆ ಕಣ್ಣು ತಾನಾಗಿಯೇ ಮುಚ್ಚಿಕೊಳ್ಳುತ್ತಂತೆ.

ಹೆಚ್.ವಿ. ಶ್ರೀಧರ್, ಬೆಂಗಳೂರು
ಬ್ಯಾಂಕ್ ಖಾತೆಯನ್ನು ಅಂತ್ಯಗೊಳಿಸಿ ಹಲವು ವರ್ಷಗಳಾದರೂ ಹುಟ್ಟುಹಬ್ಬದ ಶುಭಾಶಯಗಳು ಬರುತ್ತಲೇ ಇವೆಯಲ್ಲ?
ಬ್ಯಾಂಕೇ ದಿವಾಳಿಯಾದರೂ ತಲುಪುವಂತೆ ಶುಭಾಶಯಗಳನ್ನು ರೆಕರಿಂಗ್ ಡಿಪಾಸಿಟ್ ಅಕೌಂಟಲ್ಲಿ ಇರಿಸಿದ್ದಾರಂತೆ.

ಪಿ. ಚಿದಾನಂದ, ಜವನಗೊಂಡನಹಳ್ಳಿ
ಸಿರಿವಂತರು ಮಾತ್ರ ಮಕ್ಕಳನ್ನು ಹಡೆಯಬೇಕೆಂಬ ನಿಯಮ ಬಂದರೆ ದೇಶ ಶ್ರೀಮಂತವಾಗುವುದಲ್ಲವೆ?
ಸಿರಿವಂತರ ಮಕ್ಕಳ ಸೇವೆ ಮಾಡಲು ಬಡ ಮಕ್ಕಳು ಸಿಗದೆ ಸಿರಿವಂತರ ಮಕ್ಕಳು ಬಡವಾಗುತ್ತವೆ.

ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕಾ
ಅಂದು ಆಕಾಶವಾಣಿ. ಇಂದು ಟೀವಿ ಚಾನಲ್. ಮುಂದೆ?



MWR (ಮೈಂಡ್ ವೇವ್ ರೀಡರ್). ಅಲ್ಲಿಗೆ ಸುಸಂಸ್ಕೃತಿಯ ವಿನಾಶದ ಆರಂಭ.

ಪಿ.ಜೆ. ರಾಘವೇಂದ್ರ, ಮೈಸೂರು
ಎಂಆರ್‌ಪಿ, ಟಿಆರ್‌ಪಿ ಇವುಗಳಲ್ಲಿ ಯಾವುದು ಹೆಚ್ಚು ಮಾದಕ?
ಮಾದಕ ಎಂಆರ್‌ಪಿ; ಮಾರಕ ಟಿಆರ್‌ಪಿ.

ಕಾವ್ಯಶ್ರೀ ಪತ್ರಿಮಠ, ಸುರಪುರ
ಪ್ರಾಣಿಗಳಲ್ಲಿರುವಷ್ಟು ಸಹನೆ, ತಾಳ್ಮೆ ಮಾನವರಲ್ಲಿ ಇಲ್ಲವಲ್ಲ, ಯಾಕೆ?
ಅವು ಮದುವೆ ಆಗುವುದಿಲ್ಲವಲ್ಲ!

■ ರಾಮ್